ದಿಃ 13.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ</u>

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಸಾಕ್ಷಿ ಈಗಾಗಲೇ ಪ್ರಾಸಾ.1 ರವರ ಮೂಲಕ ಗುರುತಿಸಲಾಗಿರುವ ನಿ.ಪಿ.1 ರಿಂದ 12 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. 1 ನೇ ವಾದಿ ನನಗೆ ಬರೆದುಕೊಟ್ಟ SPA ಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 04.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ಪ್ರತಿವಾದಿ ಪರವಾಗಿ

3. ಮೊಹಿದ್ದಿನ್ ಕುನ್ನಿ ರವರಿಗೆ ಆಯಿಶಾ ಎಂಬ ಹೆಂಡತಿ ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಮುಸ್ಲಿಂ ಧರ್ಮ ಆದರೆ ಆ ಬಗ್ಗೆ ಮಸೀದಿಯಲ್ಲಿ ನೊಂದಣಿ ಆಗಿ ಇರುತ್ತದೆ ಎಂದರೆ ಸಾಕ್ಷಿ ಇರುತ್ತದೆ, ಆದರೆ ಹಳೆಯ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಮೊಹಿದ್ದಿನ್ ಕುನ್ನಿ ರವರಿಗೆ ರುಕಿಯಾಬಿ ಎಂಬ ಹೆಂಡತಿ ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಹಳೆಯದಾದ ಕಾರಣ ಅದನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ಮೊಹಿದ್ದಿನ್ ಕುನ್ನಿ ರವರ ಮಕ್ಕಳ ಮದುವೆಯಾಗುವಾಗ ಮಸೀದಿಯಲ್ಲಿ ಅವರ ಮಕ್ಕಳು ಮದುವೆಯ ದಾಖಲೆಯಲ್ಲಿ ತಂದೆಯ ಹೆಸರನ್ನು ನಮೂದಿಸುತ್ತಾರೆ ಎಂದರೆ ಸಾಕ್ಷಿ ಆ ರೀತಿ ಈಗ ಮಾಡುತ್ತಾರೆ ಎಂದು ನುಡಿಯುತ್ತಾರೆ. ಮೊಹಿದ್ದಿನ್ ಕುನ್ನಿ ರವರ ಮಕ್ಕಳು ಮದುವೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

4. 2 ನೇ ವಾದಿ ಮೊಹಮದ್ ಕುನ್ನಿ ರವರ ಮಗ ಎಂದು ತೋರಿಸಲು 2 ನೇ ವಾದಿಯ ಮದುವೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಮುಸ್ಲಿಂ ಧರ್ಮದಲ್ಲಿ ಹೆಚ್ಚು ಜನರಿಗೆ ಮೊಹಿದ್ದಿನ್ ಕುನ್ನಿ ಎಂಬ ಹೆಸರನ್ನು ಇಡುತ್ತಾರೆ ಎಂದರೆ ಸರಿ. ವಾದಿಯರ ತಂದೆ ಮೊಹಿದ್ದಿನ್ ಕುನ್ನಿ ಮತ್ತು ಪ್ರತಿವಾದಿಯ ತಂದೆ ಮೊಹಿದ್ದಿನ್ ಕುನ್ನಿ ಬೇರೆ ಬೇರೆ ವ್ಯಕ್ತಿಗಳು ಎಂದರೆ ಸುಳ್ಳು. ವಾದಿಯರ ತಂದೆ ಮೊಹಿದ್ದಿನ್ ಕುನ್ನಿ ಮತ್ತು ಪ್ರತಿವಾದಿಯ ತಂದೆ ಮೊಹಿದ್ದಿನ್ ಕುನ್ನಿ ಬೇರೆ ಬೇರೆಯಾದ ಕಾರಣದಿಂದ ನಾನು ಮೊಹಿದ್ದಿನ್ ಕುನ್ನಿ ರವರ ಹೆಂಡತಿಯರು ಆಯಿಶಾಬಿ ಮತ್ತು ರುಕಿಯಾಬಿ ಎಂಬ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನನ್ನ ಮತ್ತು 2 ನೇ ವಾದಿಯ ವಿವಾಹದ

ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಮದುವೆಯ ದಾಖಲೆಯನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ.

5. ನಿಮ್ಮ ಮತ್ತು 2 ನೇ ವಾದಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಆ ಕಾಲದಲ್ಲಿ ಆಮಂತ್ರಣ ಪತ್ರಿಕೆ ಮಾಡಿಸುತ್ತಿರಲಿಲ್ಲ, ಮನೆ ಮನೆಗೆ ಹೋಗಿ ಕರೆಯುತ್ತಿದ್ದೆವು ಎಂದು ನುಡಿಯುತ್ತಾರೆ. ಮೊಹಿದ್ದಿನ್ ಕುನ್ಹಿ ರವರ ಒಟ್ಟಿಗೆ ಮೂಡಿಗೆರೆಯಲ್ಲಿ ವಾದಿಯರು ವಾಸವಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಪ್ರತಿವಾದಿಯ ತಂದೆ ಮೊಹಿದ್ದಿನ್ ಕುನ್ಹಿ ವಾದಿಯರಿಗೆ ಸಂಬಂಧಪಡದ ಕಾರಣ ನಾವು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರು ಮೊಹಿದ್ದಿನ್ ಕುನ್ಹಿ ಮತ್ತು ತಾಯಿಯ ಹೆಸರು ಕೌಸರ್ ಬಿ ಎಂದರೆ ಸರಿ. ಮೊಹಿದ್ದಿನ್ ಕುನ್ಹಿ ಮತ್ತು ಕೌಸರ್ ಬಿ ರವರಿಗೆ ಒಬ್ಬ ಮಗ ಮಾತ್ರ ಇರುತ್ತಾರೆ. ಪ್ರತಿವಾದಿ ಜನಿಸಿದಾಗಿನಿಂದಲು ಮೂಡಿಗೆರೆ ವಿಳಾಸದಲ್ಲಿ ವಾಸವಿದ್ದಾರೆ ಎಂದರೆ ಸರಿ. ಪ್ರತಿವಾದಿಯ ತಂದೆ ಮೂಡಿಗೆರೆಯಲ್ಲಿ ಮರಣ ಹೊಂದಿದ್ದರು ಎಂದರೆ ಸರಿ. ಪ್ರತಿವಾದಿಯ ತಂದೆ ದಿಃ 10.03.2013 ರಂದು ಮರಣ ಹೊಂದಿದ್ದರು.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ